ಸಮಗ್ರವಾಗಿ ನೀರಾವರಿಗೊಳಪಡಿಸುವುದು

2079(1565); ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹನಗುಂದ)

ಅ) ಮರೋಳ ಏತ ನೀರಾವರಿ ಯೋಜನೆಯಿಂದ ನೀರಾವರಿಗೆ ಒಳಪಡುವ ಹುನಗುಂದ ತಾಲ್ಲೂಕಿನ ಜಮೀನುಗಳೆಷ್ಟು;

ಆ) ಇನ್ನುಳಿದ ಪ್ರದೇಶವನ್ನು ನೀರಾವರಿಗೆ ಒಳಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಕೊಪ್ಪಳ ಏತ ನೀರಾವರಿ ಮತ್ತು ನಂದವಾಡಗಿ ಏತ ನೀರಾವರಿಯಿಂದ ಹುನಗುಂದ ತಾಲ್ಲೂಕಿಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು (ವಿವರ ಒದಗಿಸುವುದು)?

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಮರೋಳ ಏತ ನೀರಾವರಿ ಯೋಜನೆಯ ಹಂತ–1 ರಡಿಯಲ್ಲಿ ಹುನಗುಂದ ತಾಲ್ಲೂಕಿನ 14,200 ಹೆ. ಪ್ರದೇಶವು ಒಳಪಡುತ್ತದೆ. ಹಾಗೂ ಹಂತ–2 ರಡಿಯಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ಹುನಗುಂದ ತಾಲ್ಲೂಕಿನ 24,000 ಹೆ. ಪ್ರದೇಶವನ್ನು ನೀರಾವರಿಗೊಳಪಡಿಸಲು ಯೋಜಿಸಲಾಗಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) **ಮತ್ತು** ಇ) ಇನ್ನುಳಿದ ಪ್ರದೇಶವನ್ನು ಕೊಪ್ಪಳ ಹಾಗೂ ನಂದವಾಡಗಿ ಏತ ನೀರಾವರಿ ಯೋಜನೆ ಅಡಿಯಲ್ಲಿ ಒಳಪಡಿಸಲು ಯೋಜಿಸಲಾಗಿದೆ.

ಕೊಪ್ಪಳ ಏತ ನೀರಾವರಿ ಕಾಲುವೆ ಅಡಿಯಲ್ಲಿ ಹುನಗುಂದ ತಾಲ್ಲೂಕಿನಲ್ಲಿ ನೀರಾವರಿಗೆ ಒಳಪಡುವ ಕ್ಷೇತ್ರ ಸುಮಾರು 8778 ಹೆ. ಇದ್ದು, ನೀರಿನ ಪ್ರಮಾಣ ಸುಮಾರು 1 ಟಿ.ಎಂ.ಸಿ. ಆಗಿರುತ್ತದೆ.

ನಂದವಾಡಗಿ ಏತ ನೀರಾವರಿಯಿಂದ ಹುನಗುಂದ ತಾಲ್ಲೂಕಿನ 400 ಹೆ. ಪ್ರದೇಶವು ನೀರಾವರಿಗೆ ಒಳಪಡುತ್ತದೆ.

ಕೆ.ಎಸ್.ಎಸ್.ಐ.ಡಿ.ಸಿ. ಯಲ್ಲಿ ಕರೆದಿರುವ ಟೆಂಡರ್‌ಗಳು

2080(1834); ಶ್ರೀ ಕೋನರೆಡ್ಡಿ ಎನ್.ಎಚ್ (ನವಲಗುಂದ)

ಅ) ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪದ್ಧತಿ ಯಾವಾಗಿನಿಂದ ಜಾರಿಗೆ ಬಂದಿರುತ್ತದೆ?

ಆ) ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರ ಸಮಿತಿಯನ್ನೇನಾದರೂ ರಚಿಸಿದೆಯೇ?

ಇ) ಹಾಗಿದ್ದಲ್ಲಿ, ಸಮಿತಿಯಲ್ಲಿರುವ ಸದಸ್ಯರುಗಳ ಸಂಖ್ಯೆ ಎಷ್ಟು? (ಹೆಸರು ಮತ್ತು ವಿಳಾಸಗಳ ಪೂರ್ಣ ವಿವರಗಳನ್ನು ನೀಡುವುದು);

ಈ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದವರು ಕರೆದಿರುವ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಸಂಖ್ಯೆ ಎಷ್ಟು ಮತ್ತು ಎಜೆನ್ಸಿಗಳು ಯಾವುವು (ವಿವರ ನೀಡುವುದು)?

ಉ) ಕೆ.ಎಸ್.ಎಸ್.ಐ.ಡಿ.ಸಿ. ಯವರು ಕರೆದ ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರಲ್ಲಿ ಕಡಿಮೆ ದರ ನಮೂದಿಸಿದವರನ್ನು ಕೈಬಿಟ್ಟು ಹೆಚ್ಚು ದರ ನಮೂದಿಸಿದವರಿಗೆ ಟೆಂಡರ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಕಾರಣಗಳೇನು (ವಿವರಗಳನ್ನು ನೀಡುವುದು);

ಋ) ಕೆ.ಎಸ್.ಎಸ್.ಐ.ಡಿ.ಸಿ. ಯವರು ಕರೆಯುವ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರಿಗೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು?